**ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ.,**
**ಮಂಗಳೂರು ಡೈರಿ ಆವರಣ, ಕುಲಶೇಖರ, ಮಂಗಳೂರು –575 005**
**ದೂರವಾಣಿ ಸಂಖ್ಯೆ: (0824) 2231515, 2230986 ಫ್ಯಾಕ್ಸ್ :2230029**
**Email :mddkmul@gmail.com**

**ನಂ:ದಕಹಾಒ:ಆಡಳಿತ: 7983 :2015–16** **ದಿನಾಂಕ: 07–01–2016**

# :ನೇಮಕಾತಿ ಪ್ರಕಟಣೆ:

ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟವು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಗ್ರಾಮೀಣ ಪ್ರದೇಶದಿಂದ ಹಾಲನ್ನು ಸಂಗ್ರಹಿಸಿ, ಸಂಸ್ಕರಣೆ/ವಿವಿಧ ಉತ್ಪನ್ನಗಳ ತಯಾರಿಕೆ ಮಾಡಿ ಉತ್ತಮ ಗುಣಮಟ್ಟದ ಪಾಶ್ಚರೀಕರಿಸಿದ **'ನಂದಿನಿ'** ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಗ್ರಾಹಕರಿಗೆ ಒದಗಿಸುವ ಸಹಕಾರಿ ಸಂಸ್ಥೆಯಾಗಿರುತ್ತದೆ.ನಮ್ಮ ಕಾರ್ಯಾಚರಣೆಯನ್ನು ಬಲಪಡಿಸಲು **ಈ ಕೆಳಗೆ ನಮೂದಿಸಿದ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.** ಹುದ್ದೆಗಳು, ವೇತನಶ್ರೇಣಿ, ಹುದ್ದೆಗಳ ಸಂಖ್ಯೆ, ವಿದ್ಯಾರ್ಹತೆ ಮತ್ತು ಹುದ್ದೆಗಳ ಮೀಸಲಾತಿ ವರ್ಗೀಕರಣ ಇತ್ಯಾದಿ ವಿವರಗಳನ್ನು ಈ ಕೆಳಗೆ ನಮೂದಿಸಿದೆ.

## 1) ಸಹಾಯಕ ವ್ಯವಸ್ಥಾಪಕರು(ಎ.ಹೆಚ್./ಎ.ಐ.):ವೇತನಶ್ರೇಣಿ ರೂ.28100–50100 - 7ಹುದ್ದೆಗಳು

**ವಿದ್ಯಾರ್ಹತೆ :** ಪಶು ವೈದ್ಯಕೀಯ ವಿಜ್ಞಾನದಲ್ಲಿ **B.V.Sc.ಅಥವಾ B.V.Sc. &A.H** ಪದವೀಧರರಾಗಿರಬೇಕು. ಪಶು ವೈದ್ಯಕೀಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ M.V.Sc ಪಡೆದವರಿಗೆ ಆದ್ಯತೆ ನೀಡಲಾಗುವುದು.

| | ಪ.ಜಾ. | ಪ.ಪಂ. | ಪ್ರ- I | ಪ್ರ- II-A | ಪ್ರ- II-B | ಸಾ.ಅ. |
|---|---|---|---|---|---|---|
| ಇತರೆ | 1* | | | | | |
| ಮಹಿಳೆ | | 1 | 1 | | 1 | |
| ಗ್ರಾಮೀಣ | 1* | | | 1 | | |
| ಮಾಜಿ ಸೈನಿಕರು | – | – | – | – | – | 1 |

***ಪರಿಶಿಷ್ಟ ಜಾತಿ–ಇತರೆ ಒಂದು ಮತ್ತು ಪರಿಶಿಷ್ಟ ಜಾತಿ–ಗ್ರಾಮೀಣ ಒಂದು ಒಟ್ಟು ಎರಡು ಬ್ಯಾಕ್‌ಲಾಗ್ ಹುದ್ದೆಗಳು**

## 2) ಸಹಾಯಕ ವ್ಯವಸ್ಥಾಪಕರು(ಎಫ್ ಅಂಡ್ ಎಫ್.):ವೇತನಶ್ರೇಣಿ ರೂ.28100–50100–1 ಹುದ್ದೆ

**ವಿದ್ಯಾರ್ಹತೆ** :ಕೃಷಿ ವಿಜ್ಞಾನದಲ್ಲಿ B.Sc.(Agri) ಪದವೀಧರರಾಗಿರಬೇಕು. ಕೃಷಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ.M.Sc.(Agri) ಪಡೆದವರಿಗೆ ಆದ್ಯತೆ ನೀಡಲಾಗುವುದು.

| | ಪ್ರ.–1 |
|---|---|
| ಇತರೆ | 1 |

## 3) ತಾಂತ್ರಿಕ ಅಧಿಕಾರಿ (ಡಿ.ಟಿ.): ವೇತನಶ್ರೇಣಿ ರೂ.22800–43200 –5 ಹುದ್ದೆಗಳು

**ವಿದ್ಯಾರ್ಹತೆ** : B.Sc.(DT) ಅಥವಾ B.Tech (D.Tech)ಪದವಿ ಪಡೆದಿರಬೇಕು.

**(ಇಂಜಿನಿಯರಿಂಗ್‌ನಲ್ಲಿ B.E ಅಥವಾ B.Techಪದವಿ ಪಡೆದ ಅಭ್ಯರ್ಥಿಗಳು ಈ ಹುದ್ದೆಗೆ ಅರ್ಹರಾಗುವುದಿಲ್ಲ)**

| | ಪ.ಜಾ. | ಪ್ರ- II-A | ಪ್ರ- II-B | ಸಾ.ಅ. |
|---|---|---|---|---|
| ಇತರೆ | | | 1 | |
| ಮಹಿಳೆ | 1 | 1 | – | – |
| ಗ್ರಾಮೀಣ | | 1 | | |
| ಕನ್ನಡ ಮಾಧ್ಯಮ | – | – | – | 1 |

## 4)ತಾಂತ್ರಿಕ ಅಧಿಕಾರಿ (ಇಂಜಿನಿಯರಿಂಗ್) : ವೇತನಶ್ರೇಣಿ ರೂ.22800-43200 –2 ಹುದ್ದೆಗಳು

**ವಿದ್ಯಾರ್ಹತೆ** : Electrical &Electronics ಅಥವಾ Mechanical ಇಂಜಿನಿಯರಿಂಗ್‌ನಲ್ಲಿ**B.E** ಅಥವಾ **B.Tech**ಪದವೀಧರರಾಗಿರಬೇಕು.

| | ಪ.ಪಂ. | ಸಾ.ಅ. |
|---|---|---|
| ಇತರೆ | 1 (ಇ ಅಂಡ್ ಇ) | |
| ಮಹಿಳೆ | – | 1(ಮೆಕ್ಯಾನಿಕಲ್) |

## 5)ಮಾರುಕಟ್ಟೆ ಅಧಿಕಾರಿ : ವೇತನಶ್ರೇಣಿ ರೂ.22800-43200 –3 ಹುದ್ದೆಗಳು

**ವಿದ್ಯಾರ್ಹತೆ** : ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು. ಅದರೊಂದಿಗೆ ಮಾರ್ಕೆಟಿಂಗ್ ವಿಷಯದಲ್ಲಿ ಎರಡು ವರ್ಷಗಳ M.B.A ಸ್ನಾತಕೋತ್ತರ ಪದವಿಯ ವಿದ್ಯಾರ್ಹತೆಯನ್ನು ಹೊಂದಿರಬೇಕು. ಡಿಪ್ಲೋಮಾ ಇನ್ ಕೋ-ಆಪರೇಟಿವ್ ಬಿಸಿನೆಸ್ ಮ್ಯಾನೇಜ್‌ಮೆಂಟ್ (DCBM) ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

| | ಪ.ಜಾ. | ಪ.ಪಂ. | ಸಾ.ಅ. |
|---|---|---|---|
| ಇತರೆ | 1 | 1 | 1 |

## 6)ಕಾರ್ಮಿಕ ಕಲ್ಯಾಣ ಅಧಿಕಾರಿ : ವೇತನಶ್ರೇಣಿರೂ.22800-43200 –1 ಹುದ್ದೆ

**ವಿದ್ಯಾರ್ಹತೆ:** ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು. ಅದರೊಂದಿಗೆ ಮಾನವ ಸಂಪನ್ಮೂಲ (H.R.) ವಿಷಯದಲ್ಲಿಸ್ನಾತಕೋತ್ತರ ಪದವಿ M.S.W ಪಡೆದಿರಬೇಕು. ಅಥವಾ ಪದವಿಯೊಂದಿಗೆ ಕರ್ನಾಟಕ ಸರ್ಕಾರದಿಂದ ಅಂಗೀಕೃತವಾದ ಕೈಗಾರಿಕಾ ಸಂಬಂಧ ಮತ್ತು ಪರ್ಸನಲ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಡಿಪ್ಲೋಮ P.G.D.I.R. & P.M. ತೇರ್ಗಡೆಯಾಗಿರಬೇಕು ಅಥವಾ ಕಾರ್ಖಾನೆ ಕಾಯ್ದೆಯಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರಬೇಕು.

| | ಸಾ.ಅ. |
|---|---|
| ಇತರೆ | 1 |

## 7) ಅ) ವಿಸ್ತರಣಾಧಿಕಾರಿ ದರ್ಜೆ- III : ವೇತನಶ್ರೇಣಿ ರೂ.17650-32000 –1 ಹುದ್ದೆ

**ವಿದ್ಯಾರ್ಹತೆ** : ಪದವೀಧರರಾಗಿದ್ದು ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕನಿಷ್ಠ ಮೂರು ವರ್ಷ ಸೇವೆ ಸಲ್ಲಿಸಿರಬೇಕು. ಪ್ರಸ್ತುತ ಒಂದು ವರ್ಷದಿಂದ ಸಂಘದ ಕಾರ್ಯದರ್ಶಿಯಾಗಿ ಸೇವೆಯಲ್ಲಿರಬೇಕು

| | ಸಾ.ಅ. |
|---|---|
| ಮಹಿಳೆ | 1 |

## ಆ) ವಿಸ್ತರಣಾಧಿಕಾರಿ ದರ್ಜೆ-III:ವೇತನಶ್ರೇಣಿ ರೂ.17650-32000 –1 ಹುದ್ದೆ

**ವಿದ್ಯಾರ್ಹತೆ** : B.Com. ಅಥವಾ B.B.M ವಿದ್ಯಾರ್ಹತೆಯೊಂದಿಗೆ ಕನಿಷ್ಠ ಆರು ತಿಂಗಳ ಅವಧಿಯ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ಹೊಂದಿರಬೇಕು.

| | ಪ್ರ- III-A |
|---|---|
| ಇತರೆ | 1 |

**8) ಡೇರಿ ಸೂಪರ್‌ವೈಸರ್ ದರ್ಜೆ-II: ವೇತನಶ್ರೇಣಿ ರೂ.17650-32000 -8 ಹುದ್ದೆಗಳು**

**ವಿದ್ಯಾರ್ಹತೆ** : ಯಾವುದೇ ಅಂಗೀಕೃತ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಮೆಕ್ಯಾನಿಕಲ್ ಅಥವಾ ಸಿವಿಲ್ ಅಥವಾ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಅಥವಾ ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ಸ್ ಇಂಜಿನಿಯರಿಂಗ್ ವಿಷಯಗಳಲ್ಲಿ ಡಿಪ್ಲೋಮಾ ತೇರ್ಗಡೆಯಾಗಿರಬೇಕು. ಅದರೊಂದಿಗೆ ಸಹಕಾರಿ ಡೈರಿಯಲ್ಲಿ ಎರಡು ವರ್ಷಗಳ ಅನುಭವ ಹೊಂದಿರಬೇಕು.

| | ಪ.ಜಾ. | ಪ್ರ- II-A | ಪ್ರ- II-B | ಸಾ.ಅ. |
|---|---|---|---|---|
| ಇತರೆ | | | 1(Mech.) | 1(E&C) |
| ಮಹಿಳೆ | 1(E&E) | 1(Mech) | | 1(E&E)<br>1(E&C) |
| ಗ್ರಾಮೀಣ | 1(Civil) | | | 1(E&C) |

**9)ಕಿರಿಯ ಸಿಸ್ಟಂ ಅಪರೇಟರ್ : ವೇತನಶ್ರೇಣಿ ರೂ.14550-26700 -1 ಹುದ್ದೆ**

**ವಿದ್ಯಾರ್ಹತೆ** : ಕಂಪ್ಯೂಟರ್ ಅಪ್ಲಿಕೇಷನ್ ಪದವಿಯಲ್ಲಿ ತೇರ್ಗಡೆಯಾಗಿರಬೇಕು. (B.C.A)

| | ಸಾ.ಅ. |
|---|---|
| ಗ್ರಾಮೀಣ | 1 |

**10)ಕೆಮಿಸ್ಟ್ ದರ್ಜೆ- II:ವೇತನಶ್ರೇಣಿ ರೂ.14550-26700 - 2 ಹುದ್ದೆಗಳು**

**ವಿದ್ಯಾರ್ಹತೆ** : ರಸಾಯನ ಶಾಸ್ತ್ರ /ಗುಣ ನಿಯಂತ್ರಣ ವಿಷಯವನ್ನು ಐಚ್ಛಿಕ ವಿಷಯವಾಗಿ ಹೊಂದಿರುವ ವಿಜ್ಞಾನ ಪದವಿಯಲ್ಲಿ ತೇರ್ಗಡೆಯಾಗಿರಬೇಕು (B.Sc.)

| | ಪ್ರ- II-A | ಸಾ.ಅ. |
|---|---|---|
| ಇತರೆ | 1 | 1 |

**11) ಮಾರುಕಟ್ಟೆ ಸಹಾಯಕರು ದರ್ಜೆ- II: ವೇತನಶ್ರೇಣಿ ರೂ.14550-26700 -1 ಹುದ್ದೆ**

**ವಿದ್ಯಾರ್ಹತೆ** : B.B.M ಅಥವಾ B.Com. ಪದವಿಯೊಂದಿಗೆ ಗಣಕ ಯಂತ್ರ ನಿರ್ವಹಣೆಯ ಮೂಲಭೂತ ಅರಿವು ಹೊಂದಿರಬೇಕು. ಡಿಪ್ಲೋಮಾ ಇನ್ ಕೋ-ಆಪರೇಟಿವ್ ಬಿಸಿನೆಸ್ ಮ್ಯಾನೇಜ್‌ಮೆಂಟ್ (DCBM) ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

| | ಸಾ.ಅ. |
|---|---|
| ಗ್ರಾಮೀಣ | 1 |

**12)ಲೆಕ್ಕ ಸಹಾಯಕರು ದರ್ಜೆ- II: ವೇತನಶ್ರೇಣಿ ರೂ.14550-26700 - 1 ಹುದ್ದೆ**

**ವಿದ್ಯಾರ್ಹತೆ:** ವಾಣಿಜ್ಯ ಪದವಿಯಲ್ಲಿ ತೇರ್ಗಡೆಯಾಗಿರಬೇಕು. (B.Com)

| | ಸಾ.ಅ. |
|---|---|
| ಇತರೆ | 1 |

## 13)ಅ) ಕಿರಿಯ ತಾಂತ್ರಿಕರು : ವೇತನಶ್ರೇಣಿ ರೂ.11600-20100- 10 ಹುದ್ದೆಗಳು

**ವಿದ್ಯಾರ್ಹತೆ :** ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯೊಂದಿಗೆ ಯಾವುದೇ ಅಂಗೀಕೃತ ಕೈಗಾರಿಕಾ ತರಬೇತಿ ಸಂಸ್ಥೆ ಅಥವಾ ಕೇಂದ್ರಗಳಿಂದ ರೆಫ್ರಿಜರೇಷನ್ ಅಂಡ್ ಎ.ಸಿ. ಮೆಕ್ಯಾನಿಕ್ ಅಥವಾ ಫಿಟ್ಟರ್ ಅಥವಾ ಇಲೆಕ್ಟ್ರೀಷಿಯನ್ ವಿಷಯಗಳಲ್ಲಿ (Engineering Trades) ಎರಡು ವರ್ಷಗಳ I.T.I. (National Trade Certificate) ತೇರ್ಗಡೆಯಾಗಿರಬೇಕು. ಅದರೊಂದಿಗೆ ಸಹಕಾರಿಡೈರಿಯಲ್ಲಿ ಎರಡು ವರ್ಷಗಳ ಅನುಭವ ಹೊಂದಿರಬೇಕು.

| | ಪ.ಜಾ. | ಪ.ಪಂ. | ಪ್ರ- II-A | ಪ್ರ- III-B | ಸಾ.ಅ. |
|---|---|---|---|---|---|
| ಇತರೆ | 1 (MRAC) | - | 1 (Electrician) | - | 1 (Fitter) 1 ((Electrician) |
| ಮಹಿಳೆ | - | 1 (MRAC) | - | 1 (Electrician) | 1 (MRAC) |
| ಗ್ರಾಮೀಣ | - | - | 1 (Electrician) | - | 1 (Fitter) |
| ಮಾಜಿ ಸೈನಿಕರು | | | | | 1 (Electrician) |

## ಆ)ಕಿರಿಯ ತಾಂತ್ರಿಕರು : ವೇತನಶ್ರೇಣಿ ರೂ.11600-20100- 1 ಹುದ್ದೆ

**ಬಾಯ್ಲರ್ ಟ್ರೇಡ್:** ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯೊಂದಿಗೆ ಕರ್ನಾಟಕ ಸರ್ಕಾರವು ನಡೆಸುವ ಪ್ರಥಮ ದರ್ಜೆ ಬಾಯ್ಲರ್ ಅಟೆಂಡೆಂಟ್ ಸರ್ಟಿಫಿಕೇಟ್ ಆಫ್ ಕಾಂಪಿಟೆನ್ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.ಅದರೊಂದಿಗೆ ಸಹಕಾರಿಡೈರಿಯಲ್ಲಿ ಎರಡು ವರ್ಷಗಳ ಅನುಭವ ಹೊಂದಿರಬೇಕು.

| | ಪ್ರ- III-A |
|---|---|
| ಮಹಿಳೆ | 1 (Boiler) |

**ಮೇಲೆ ನಮೂದಿಸಿರುವ ಸಂಕ್ಷಿಪ್ತ ಪದಗಳ ವಿವರ :**

**ಪ.ಜಾ**=ಪರಿಶಿಷ್ಟ ಜಾತಿ, **ಪ.ಪಂ**=ಪರಿಶಿಷ್ಟ ಪಂಗಡ, **ಪ್ರ.** I = ಪ್ರವರ್ಗ-I, **ಪ್ರ.** II-A=ಪ್ರವರ್ಗ- II-A,**ಪ್ರ.** II-B =ಪ್ರವರ್ಗ- II-B, **ಪ್ರ.**-III-A =ಪ್ರವರ್ಗ- III-A, **ಪ್ರ.** III-B=ಪ್ರವರ್ಗ- III-Bಮತ್ತು **ಸಾ.ಅ** =ಸಾಮಾನ್ಯ ಅರ್ಹತೆ

### 1. ಸಾಮಾನ್ಯ ಷರತ್ತುಗಳು:

**ಪದವಿ** ಎಂದರೆ ಅಭ್ಯರ್ಥಿಯು 10+2 ರ ವಿಧ್ಯಾಭ್ಯಾಸದ ನಂತರ ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾಗಿರುವ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ನಿಯತವಾಗಿ ಪಡೆದ **ಕನಿಷ್ಠ ಮೂರು ವರ್ಷಗಳ ಅವಧಿಯ ಸಾಂಪ್ರದಾಯಿಕ ಪದವಿ (10+2+3).**

**ಸ್ನಾತಕೋತ್ತರ ಪದವಿ** ಎಂದರೆ (10+2+3) ರ ವಿದ್ಯಾಭ್ಯಾಸದ ನಂತರ ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾಗಿರುವ ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ನಿಯತವಾಗಿ ಪಡೆದ **ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ (10+2+3+2).**

ಸೂಚನೆ:-ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈಮೇಲಿನ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿ ರುವುದಿಲ್ಲ.

ಕನ್ನಡ ಭಾಷಾ ಜ್ಞಾನ (ಓದುವುದು ಮತ್ತು ಬರೆಯುವುದು) ಕಡ್ಡಾಯವಾಗಿರುತ್ತದೆ.

ಪ್ರವರ್ಗ I,II-A,II-B,III-A ಮತ್ತು III-Bಇವುಗಳಿಗೆ ಮೀಸಲಿಟ್ಟ ಆದರೆ ಆಯಾ ವರ್ಗದ ಅರ್ಹ ಅಭ್ಯರ್ಥಿಗಳ ಲಭ್ಯತೆಯ ಕೊರತೆಯಿಂದಾಗಿ ಭರ್ತಿ ಮಾಡಲಾಗದ ಸ್ಥಾನಗಳನ್ನು ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು. ಪ್ರತಿಯೊಂದು ಪ್ರವರ್ಗದಲ್ಲಿ ಮೇಲಿನಂತೆ ಮಹಿಳೆ ಮತ್ತು ಮಾಜಿ ಸೈನಿಕರು ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ಹುದ್ದೆಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಅಭ್ಯರ್ಥಿಗಳು ಅವಶ್ಯವಿರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದೊಳಗೆ ನೇಮಕಾತಿ ಪ್ರಕಟಣೆಯ ಕೊನೆಯಲ್ಲಿ ನೀಡಲಾಗಿರುವ ನಮೂನೆಗಳಲ್ಲಿಯೇ ಪಡೆದು ಸಲ್ಲಿಸಬೇಕು.

ಮೂಲವೇತನದೊಂದಿಗೆ ಒಕ್ಕೂಟದ ಸೇವಾ ನಿಯಮಗಳಲ್ಲಿ ಕಾಲಕಾಲಕ್ಕೆ ಲಭ್ಯವಿರುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ಇತರ ಭತ್ಯೆಗಳನ್ನು ಪಾವತಿಸಲಾಗುವುದು. ಭವಿಷ್ಯನಿಧಿ/ಗ್ರಾಚ್ಯುಟಿ ಇತ್ಯಾದಿ ಶಾಸನಬದ್ಧ ಸೌಲಭ್ಯಗಳನ್ನು ನೀಡಲಾಗುವುದು.

ಸಹಾಯಕ ವ್ಯವಸ್ಥಾಪಕರು (ಎ.ಹೆಚ್./ಎ.ಐ.), ಸಹಾಯಕ ವ್ಯವಸ್ಥಾಪಕರು(ಎಫ್ ಅಂಡ್ ಎಫ್.), ಮಾರುಕಟ್ಟೆ ಅಧಿಕಾರಿ ಮತ್ತು ವಿಸ್ತರಣಾಧಿಕಾರಿ ದರ್ಜೆ–IIIಹುದ್ದೆಗಳಿಗೆ ನೇಮಕಗೊಳ್ಳುವ ಅಭ್ಯರ್ಥಿಗಳು ಗ್ರಾಮೀಣ ಪ್ರದೇಶ ದಲ್ಲಿ ವ್ಯಾಪಕ ಪ್ರವಾಸವನ್ನು ಕೈಗೊಳ್ಳುವುದು ಕಡ್ಡಾಯವಾಗಿರುತ್ತದೆ. ತಾಂತ್ರಿಕ ಅಧಿಕಾರಿ (ಡಿ.ಟಿ.), ತಾಂತ್ರಿಕ ಅಧಿಕಾರಿ (ಇಂಜಿನಿಯರಿಂಗ್), ಡೈರಿ ಸೂಪರ್‌ವೈಸರ್ ದರ್ಜೆ–II, ಕೆಮಿಸ್ಟ್ ದರ್ಜೆ–II ಮತ್ತು ಕಿರಿಯ ತಾಂತ್ರಿಕರು ಹುದ್ದೆಗಳಿಗೆ ನೇಮಕಗೊಳ್ಳುವ ಅಭ್ಯರ್ಥಿಗಳು ಕಾನೂನು ರೀತ್ಯಾ ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

ಹಾಲು ಉತ್ಪಾದಕರ ಸಂಘಗಳ ಕಾರ್ಯದರ್ಶಿಗಳಿಗೆ ಸಾಮಾನ್ಯ ಅರ್ಹತೆ – ಮಹಿಳೆಗೆ ಮೀಸಲಿರಿಸಿದ ವಿಸ್ತರಣಾಧಿಕಾರಿ ದರ್ಜೆ– III ರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಸೇವೆ ಸಲ್ಲಿಸಿದ ಮತ್ತು ಪ್ರಸಕ್ತ ಸೇವೆ ಸಲ್ಲಿಸುತ್ತಿರುವ ಬಗ್ಗೆ ಪ್ರಕಟಣೆಯ ಕೊನೆಯಲ್ಲಿ ನೀಡಲಾಗಿರುವ ನಮೂನೆಯಲ್ಲಿ ಸಂಘದ ಅಧ್ಯಕ್ಷರಿಂದ ಪ್ರಮಾಣಪತ್ರವನ್ನು ಪಡೆದು ಆಯಾ ಪ್ರದೇಶದ ವಿಸ್ತರಣಾಧಿಕಾರಿ ಅಥವಾ ಸಹಾಯಕ ವ್ಯವಸ್ಥಾಪಕರು (ಶೇ.) ಇವರಿಂದ ದೃಢೀಕರಿಸಿ ಅರ್ಜಿಯೊಂದಿಗೆ ಕಳುಹಿಸಿಕೊಡತಕ್ಕದ್ದು. ಇಲ್ಲದಿದ್ದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

ಡೇರಿ ಸೂಪರ್‌ವೈಸರ್ ದರ್ಜೆ–II ಮತ್ತು ಕಿರಿಯ ತಾಂತ್ರಿಕರು ಹುದ್ದೆಗಳಿಗೆ ಸಹಕಾರಿ ಡೈರಿಯಲ್ಲಿ ಎರಡು ವರ್ಷಗಳ ಅನುಭವ ಹೊಂದಿರುವಬಗ್ಗೆ ಪ್ರಮಾಣಪತ್ರ ಪಡೆದು ಅರ್ಜಿಯೊಂದಿಗೆ ಕಳುಹಿಸಿಕೊಡತಕ್ಕದ್ದು. ಇಲ್ಲದಿದ್ದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

**2. ವಯೋಮಿತಿ:**

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಕನಿಷ್ಟ ವಯೋಮಿತಿ – 18 ವರ್ಷಗಳು ಮತ್ತು ಗರಿಷ್ಟ ವಯೋಮಿತಿ: 1. **ಸಾಮಾನ್ಯ ಅರ್ಹತೆ** – 35 ವರ್ಷಗಳು, 2. **ಪ್ರವರ್ಗ** II-A, II-B, III-A ಮತ್ತು III-B – 38 ವರ್ಷಗಳು ಹಾಗೂ 3. **ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು** ಪ್ರವರ್ಗ I – 40 ವರ್ಷಗಳು. **ಅಂಗವಿಕಲರಿಗೆ ಮತ್ತು ವಿಧವೆಯರಿಗೆ** ವಯೋಮಿತಿಯಲ್ಲಿ **ಗರಿಷ್ಟ 10 ವರ್ಷಗಳ ಸಡಿಲಿಕೆ** ಇರುತ್ತದೆ. ವಯೋಮಿತಿ ಸಡಿಲಿಕೆಯ ವಿನಾಯಿತಿ:ರಿಯಾಯಿತಿ ಸೌಲಭ್ಯ ಪಡೆಯಲಿಚ್ಛಿಸುವವರು ಈ ಬಗ್ಗೆ ಅಗತ್ಯ ಪ್ರಮಾಣ ಪತ್ರ:ದಾಖಲೆ ಸಲ್ಲಿಸಬೇಕು.ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಭಾರತೀಯ ಸಶಸ್ತ್ರ ದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳು. ಅಭ್ಯರ್ಥಿಯು ನ್ಯಾಷನಲ್ ಕೆಡೆಟ್

ಕಾರ್ಪ್ಸ್‌ನಲ್ಲಿ ಪೂರ್ಣಕಾಲಿಕ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂತಹ ಕೆಡೆಟ್ ಪರಿವೀಕ್ಷಕನಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು.

**3. ಶುಲ್ಕ:**

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ I, ಮಾಜಿ ಸೈನಿಕರು ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ರೂ.200/- ಮತ್ತು ಇತರೆ ಅಭ್ಯರ್ಥಿಗಳಿಗೆ ರೂ.400/- ಗಳಿಗೆ "**Managing Director, Dakshina Kannada Co-operative Milk Producers' Union Ltd.**," ಇವರ ಹೆಸರಿನಲ್ಲಿ ಮಂಗಳೂರಿನಲ್ಲಿ ಸಂದಾಯವಾಗುವಂತೆ ಪಡೆದ ಕ್ರಾಸ್ ಮಾಡಿದ ಡಿ.ಡಿ. ಯನ್ನು ಅರ್ಜಿಯ ಜೊತೆ ಲಗತ್ತಿಸಬೇಕು. ಶುಲ್ಕವನ್ನು ಪಾವತಿಸದೇ ಇರುವ ಅಭ್ಯರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.

**4. ಅರ್ಹತಾ ಷರತ್ತುಗಳು:**

ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

ಆ) ಅಭ್ಯರ್ಥಿಗಳು ಮಾನಸಿಕವಾಗಿ ಮತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಅತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನೂನ್ಯತೆಯಿಂದ ಮುಕ್ತರಾಗಿರಬೇಕು.

ಇ) ದೈಹಿಕವಾಗಿ ಅನರ್ಹರಾಗಿದ್ದರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಒಕ್ಕೂಟವು ಕಾಯ್ದಿರಿಸಿಕೊಂಡಿದೆ.

**5. ಆಯ್ಕೆ ವಿಧಾನ :**ಹುದ್ದೆಗಳಿಗೆ ನಿಗದಿಪಡಿಸಿದ ಅರ್ಹತಾ ಪರೀಕ್ಷೆ (Qualifying Exam.) ಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು 1:10 ರ ಅನುಪಾತದಲ್ಲಿ ಲಿಖಿತ ಪರೀಕ್ಷೆಗೆ ಆಹ್ವಾನಿಸಿ, ಬಾಹ್ಯ ಮೂಲಗಳಿಂದ ಲಿಖಿತ ಪರೀಕ್ಷೆ ನಡೆಸಲಾಗುವುದು. ಲಿಖಿತ ಪರೀಕ್ಷೆಯು ವಿವರಣಾತ್ಮಕ ಮತ್ತು ವಸ್ತುನಿಷ್ಠ ಬಹುಆಯ್ಕೆ ಮಾದರಿಯ ಪತ್ರಿಕೆಗಳನ್ನು ಹೊಂದಿರುತ್ತದೆ.ವಿಸ್ತರಣಾಧಿಕಾರಿ ಹುದ್ದೆಗಳಿಗೆ ಕನ್ನಡ ಭಾಷೆಗೆ 40 ಅಂಕಗಳು, ಆಂಗ್ಲ ಭಾಷೆಗೆ 30 ಅಂಕಗಳು, ಸಾಮಾನ್ಯ ಜ್ಞಾನಕ್ಕೆ 30 ಅಂಕಗಳು ಮತ್ತು ಸಹಕಾರಿ ವಿಷಯಕ್ಕೆ 100 ಅಂಕಗಳು ಒಟ್ಟು 200 ಅಂಕಗಳನ್ನು ಒಳಗೊಂಡ ಲಿಖಿತ ಪರೀಕ್ಷೆ ಇರುತ್ತದೆ. ಉಳಿಕೆ ಹುದ್ದೆಗಳಿಗೆ ಕನ್ನಡ ಭಾಷೆಗೆ 40 ಅಂಕಗಳು, ಆಂಗ್ಲ ಭಾಷೆಗೆ 30 ಅಂಕಗಳು, ಸಾಮಾನ್ಯ ಜ್ಞಾನಕ್ಕೆ 30 ಅಂಕಗಳು,**ಆಯಾ ವಿಷಯಗಳ ತಾಂತ್ರಿಕತೆಗೆ ಸಂಬಂಧಿಸಿದ ವಿಷಯಕ್ಕೆ 70** ಅಂಕಗಳು**ಮತ್ತು** ಸಹಕಾರಿ ವಿಷಯಕ್ಕೆ 30 ಅಂಕಗಳು ಒಟ್ಟು 200 ಅಂಕಗಳನ್ನು ಒಳಗೊಂಡ ಲಿಖಿತ ಪರೀಕ್ಷೆ ಇರುತ್ತದೆ.
ಸಹಕಾರಕ್ಕೆ ಸಂಬಂಧಪಟ್ಟ ವಿಷಯವು ಈ ಕೆಳಕಂಡ ಪಠ್ಯಕ್ರಮ ಒಳಗೊಂಡಿರುತ್ತದೆ.

i) ಸಹಕಾರ ಚಳುವಳಿಯ ಇತಿಹಾಸ ii) ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಸಂಘಗಳ ಪಾತ್ರ iii) ಸಹಕಾರ ಸಂಘಗಳ ರಚನೆ, ಆಡಳಿತ, ಕಾರ್ಯನಿರ್ವಹಣೆ ಮತ್ತು ಲೆಕ್ಕಪತ್ರ ನಿರ್ವಹಣೆ iv) ಸಹಕಾರ ಕೃಷಿ ಪತ್ತಿನ ವ್ಯವಸ್ಥೆ v) ಸಹಕಾರ ಸಂಘಗಳ ಕಾನೂನು.

ಲಿಖಿತ ಪರೀಕ್ಷೆಯಲ್ಲಿ ಗಳಿಸುವ ಅಂಕಗಳನ್ನು ಶೇ. 85 ಕ್ಕೆ ಇಳಿಸಿ, ಪ್ರಾಪ್ತವಾಗುವ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು 1:5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ 15 ಅಂಕಗಳನ್ನು ನಿಗದಿಪಡಿಸಿದ್ದು ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳನ್ನು ಒಟ್ಟುಗೂಡಿಸಿ ಅರ್ಹತೆಯ ಆಧಾರದಲ್ಲಿ ಅರ್ಹ ಅಭ್ಯರ್ಥಿಗಳನ್ನು ಅಂತಿಮವಾಗಿ ಆಯ್ಕೆ ಮಾಡಲಾಗುತ್ತದೆ.

ಈ ಹುದ್ದೆಗಳ ಲಿಖಿತ ಪರೀಕ್ಷೆ ಮತ್ತು ಸಂದರ್ಶನವನ್ನು ಮಂಗಳೂರಿನಲ್ಲಿ ನಡೆಸಲಾಗುವುದು. ಕರೆಪತ್ರ ಪಡೆಯುವ ಅಭ್ಯರ್ಥಿಗಳು ಒಕ್ಕೂಟವು ನಡೆಸುವ ಲಿಖಿತ ಪರೀಕ್ಷೆಗೆ/ ಮತ್ತು ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು. ಆಯ್ಕೆಯಾದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷಾ/ಸಂದರ್ಶನದ ದಿನಾಂಕವನ್ನು ತಿಳಿಸಲಾಗುವುದು ಅಲ್ಲದೇ ಅವರುಗಳಿಗೆ ಪರೀಕ್ಷಾ ಪ್ರವೇಶ ಪತ್ರಗಳನ್ನು ರವಾನಿಸಲಾಗುವುದು.**ಅಭ್ಯರ್ಥಿಗಳ**

**ಅರ್ಹತೆಯ ಬಗ್ಗೆ ಒಕ್ಕೂಟದ ನೇಮಕಾತಿ ಸಮಿತಿಯ ನಿರ್ಣಯವೇ ಅಂತಿಮವಾಗಿದ್ದು ಇದಕ್ಕೆ ಅಭ್ಯರ್ಥಿಯು ಬದ್ಧರಾಗಿರಬೇಕು.**

*ಬ್ಯಾಕ್‌ಲಾಗ್ ಹುದ್ದೆಗಳಿಗೆ ಯಾವುದೇ ಲಿಖಿತ ಪರೀಕ್ಷೆ ಇರುವುದಿಲ್ಲ. ಸದರಿ ಬ್ಯಾಕ್‌ಲಾಗ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಯಾವುದೇ ಶುಲ್ಕವನ್ನು ಪಾವತಿಸುವಂತಿಲ್ಲ. ಪರಿಶಿಷ್ಟ ಜಾತಿ – ಗ್ರಾಮೀಣ ಮತ್ತು ಪರಿಶಿಷ್ಟ ಜಾತಿ –ಇತರೆ ಒಟ್ಟು ಎರಡು ಸಹಾಯಕ ವ್ಯವಸ್ಥಾಪಕರು (ಎಹೆಚ್/ಎಐ) ಬ್ಯಾಕ್‌ಲಾಗ್ ಹುದ್ದೆಗಳನ್ನು ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ಪರಿಶಿಷ್ಟ ಜಾತಿ ಮತ್ತು (ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸಿದತುಂಬದೇ ಇರುವ ಸ್ಥಾನಗಳು) (ವಿಶೇಷ ನೇಮಕಾತಿ) ನಿಯಮಗಳು 2001 ಮತ್ತು ದಿನಾಂಕ 01–06–2002 ರ ಪ್ರಕಟಣೆಯಲ್ಲಿ ತಿದ್ದುಪಡಿಯಾದ ನಿಯಮಗಳ ಅವಕಾಶಗಳ ರೀತ್ಯಾ ಅರ್ಹತಾ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಒಟ್ಟು ಅಂಕಗಳ ಶೇಕಡವಾರನ್ನು ಆಧರಿಸಿ 18 ವರ್ಷದಿಂದ 28 ವರ್ಷ ವಯೋಮಿತಿಯುಳ್ಳ 29 ವರ್ಷದೊಳಗಿನ ಅಭ್ಯರ್ಥಿಗಳ ಒಂದು ಜ್ಯೇಷ್ಠತಾ ಪಟ್ಟಿಯನ್ನು ಹಾಗೂ 29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳ ಇನ್ನೊಂದು ಜ್ಯೇಷ್ಠತಾ ಪಟ್ಟಿಯನ್ನು ಮಾಡಲಾಗುವುದು.29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳಜ್ಯೇಷ್ಠತಾ ಪಟ್ಟಿಯಲ್ಲಿರುವವರಿಗೆಮೊದಲ ಆದ್ಯತೆ ನೀಡಲಾಗುವುದು. ಅಭ್ಯರ್ಥಿಗಳು ಅರ್ಜಿಯಲ್ಲಿ ಅರ್ಹತಾ ಪರೀಕ್ಷೆಯಲ್ಲಿಗಳಿಸಿದ ಒಟ್ಟು ಶೇಕಡವಾರು ಅಂಕಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

**6. ಪ್ರಮುಖ ಸೂಚನೆಗಳು**

**i. ಜಾತಿ ಮೀಸಲಾತಿ ಪ್ರಮಾಣಪತ್ರಗಳು**ಜಾತಿ ಮೀಸಲಾತಿ ಕೋರಬಯಸುವ –

1. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು – ನಮೂನೆ 'ಡಿ' ಯಲ್ಲಿ
2. ಪ್ರವರ್ಗ I ರ ಅಭ್ಯರ್ಥಿಗಳು – ನಮೂನೆ ' ಇ' ಯಲ್ಲಿ ಹಾಗೂ
3. ಪ್ರವರ್ಗ II-A,II-B,III-A ಮತ್ತು III-B ರ ಅಭ್ಯರ್ಥಿಗಳು – ನಮೂನೆ ' ಎಫ್' ನಲ್ಲಿ ಸಂಬಂಧಿತ ತಹಸೀಲ್ದಾರರಿಂದಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪ್ರಮಾಣಪತ್ರವನ್ನು ಪಡೆದಿರಬೇಕು ಹಾಗೂ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು. ಅಂದರೆ, ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣಪತ್ರಗಳನ್ನು ಪಡೆದ ದಿನಾಂಕದಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದವರಗೆ ಐದು ವರ್ಷಗಳ ಅವಧಿಯಲ್ಲಿರಬೇಕು. ಈ ಪ್ರಮಾಣಪತ್ರಗಳ ನಮೂನೆಗಳನ್ನು ಈ ಪ್ರಕಟಣೆಯ ಕೊನೆಯಲ್ಲಿ ನೀಡಲಾಗಿರುತ್ತದೆ.

**ಗ್ರಾಮೀಣ ಅಭ್ಯರ್ಥಿ:**

ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ 1 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಗ್ರಾಮೀಣ ಮೀಸಲಾತಿಯನ್ನುಪಡೆಯಲು ಅರ್ಹರು. ಈ ಪ್ರಮಾಣಪತ್ರಗಳು ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಿಂಧುವಾಗಿರಬೇಕು.

ಗ್ರಾಮೀಣ ಮೀಸಲಾತಿಯನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ I, II-A, II-B, III-A ಮತ್ತು III-B ರ ಅಭ್ಯರ್ಥಿಗಳು ನಮೂನೆ–2 ರಲ್ಲಿ ಗ್ರಾಮೀಣ ಮೀಸಲಾತಿ ಪ್ರಮಾಣಪತ್ರವನ್ನು ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ–2 ರ ಗ್ರಾಮೀಣ ಮೀಸಲಾತಿ ಪ್ರಮಾಣಪತ್ರದ ಜೊತೆಗೆ ನಮೂನೆ–1 ರಲ್ಲಿ ಅವರು ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪ್ರಮಾಣಪತ್ರವನ್ನು ಸಂಬಂಧಿತ ತಹಸೀಲ್ದಾರರಿಂದ ಪಡೆದು ಸಲ್ಲಿಸಬೇಕು. ಗ್ರಾಮೀಣ ಮೀಸಲಾತಿ ಪ್ರಮಾಣಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ. ನಮೂನೆ–2 ರ ಗ್ರಾಮೀಣ ಮೀಸಲಾತಿ ಪ್ರಮಾಣಪತ್ರವನ್ನು ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಅದಕ್ಕೆ ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲುರುಜು ಪಡೆದಿರತಕ್ಕದ್ದು.

**ಕನ್ನಡ ಮಾಧ್ಯಮ ಅಭ್ಯರ್ಥಿ:**

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು1 ರಿಂದ 10 ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆಸಂಬಂಧಿತ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರಿನೊಂದಿಗೆ ಪ್ರಮಾಣಪತ್ರವನ್ನು ಪಡೆದು ಸಲ್ಲಿಸಬೇಕು.

**ಮಾಜಿ ಸೈನಿಕರು :**

ಮಾಜಿ ಸೈನಿಕರು ಮತ್ತು ಕೇಂದ್ರ ಸಶಸ್ತ್ರ ದಳಗಳಲ್ಲಿಸೇವೆ ಸಲ್ಲಿಸುವಾಗಹತರಾದ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗುತ್ತಾರೆ. ಆದರೆ ಕುಟುಂಬದವರಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ. ಮಾಜಿ ಸೈನಿಕರ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಯಮಾನುಸಾರ ಆ ಮೀಸಲಾತಿಗೆ ಅರ್ಹರೇ? ಎಂಬುವುದನ್ನು ಹತ್ತಿರದ ಜಿಲ್ಲಾ ಸೈನಿಕ್ ಬೋರ್ಡ್‌ನಿಂದ ತಿಳಿದುಕೊಂಡು ಮೀಸಲಾತಿಯನ್ನು ಕೋರುವುದು ಸೂಕ್ತ. ಸೈನಿಕ ಸೇವೆಯಿಂದ ಬಿಡುಗಡೆಯಾದ/ ಮುಕ್ತಿ ಹೊಂದಿದ ಬಗೆಗಿನ ಪ್ರಮಾಣಪತ್ರವನ್ನು ಸಲ್ಲಿಸಬೇಕು.

ii.**ಕಡ್ಡಾಯವಾಗಿ ಹಾಜರುಪಡಿಸಬೇಕಾದ ಪ್ರಮಾಣಪತ್ರಗಳು**

ವಿದ್ಯಾರ್ಹತೆಗೆ ಸಂಬಂಧಿಸದ ಎಲ್ಲಾ ವರ್ಷಗಳ/ ಸೆಮಿಸ್ಟರ್‌ಗಳ ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರ ಹಾಗೂ ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣಪತ್ರ ಅಥವಾ ವರ್ಗಾವಣೆ ಪ್ರಮಾಣಪತ್ರ ಅಥವಾ ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ (extract of cumulative record)ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ಅರ್ಜಿಯನ್ನು ಪರಿಗಣಿಸಲಾಗುದಿಲ್ಲ. ವಿವಿಧ ಮೀಸಲಾತಿಗಳನ್ನು ಕೋರಿದಲ್ಲಿ ಮೀಸಲಾತಿ ಪ್ರಮಾಣಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಮೀಸಲಾತಿಗೆ ಸಂಬಂಧಿಸಿದಂತೆ ಸಲ್ಲಿಸಬೇಕಾದ ಪ್ರಮಾಣಪತ್ರಗಳನ್ನು ಅಭ್ಯರ್ಥಿಗಳು ಸಲ್ಲಿಸದಿದ್ದಲ್ಲಿ ಅಂತಹವರಿಗೆ ಮೀಸಲಾತಿ ಸೌಲಭ್ಯವನ್ನು ನೀಡಲಾಗುವುದಿಲ್ಲ.

ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು. ಈಗಾಗಲೇ ಸರ್ಕಾರಿ/ ಅರೆ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಅವರು ಸೇವೆಯಲ್ಲಿರುವ ಬಗ್ಗೆ ಅರ್ಜಿಯಲ್ಲಿರುವ ನಿಗಧಿತ ಅಂಕಣವನ್ನು ತುಂಬತಕ್ಕದ್ದು ಹಾಗೂ ಅವರ ಸೇವಾ ಪ್ರಮಾಣಪತ್ರ ಮತ್ತು ಸದರಿ ಹುದ್ದೆಗೆ ಅರ್ಜಿಸಲ್ಲಿಸುವ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು (No Objection Certificate) ಸಂಬಂಧಿತ ನೇಮಕಾತಿ ಪ್ರಾಧಿಕಾರದಿಂದ ಪಡೆದು ಸಲ್ಲಿಸಬೇಕು.

**iii.ಪರೀಕ್ಷಾರ್ಥ ಅವಧಿ:**

ಆಯ್ಕೆಗೊಂಡ ಅಭ್ಯರ್ಥಿಗಳನ್ನು ಪ್ರಾರಂಭದಲ್ಲಿ ಎರಡು ವರ್ಷಗಳ ಪರೀಕ್ಷಾರ್ಥ ಅವಧಿಗೆ ನೇಮಕಾತಿ ಮಾಡಲಾಗುವುದು. ಅವಶ್ಯವಿದ್ದಲ್ಲಿ ಪರೀಕ್ಷಾರ್ಥ ಅವಧಿಯನ್ನು ವಿಸ್ತರಿಸಲಾಗುವುದು. ಪರೀಕ್ಷಾರ್ಥ ಅವಧಿಯಲ್ಲಿ ಅಭ್ಯರ್ಥಿಗಳ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಸೇವೆಯನ್ನು ಖಾಯಂಗೊಳಿಸಲಾಗುವುದು.

**iv.ದುರ್ನಡತೆ:**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಹೊಂದಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂಬ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದಲ್ಲಿ ಹಾಗೂ ಒಕ್ಕೂಟದಿದಿಂದ ನೀಡಲಾದ ಯಾವುದೇ ಸೂಚನೆಗಳನ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ

ಯಾವುದೇ ಇತರ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ ಒಕ್ಕೂಟವು ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

**v.ಅರ್ಜಿ ಸಲ್ಲಿಸುವ ವಿಧಾನ :**

www.dkmul.comನಲ್ಲಿ ನೀಡಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಸ್ಪಷ್ಟವಾಗಿ ಬರೆದು ಅಥವಾ ಬೆರಳಚ್ಚು/ಕಂಪ್ಯೂಟರ್ ಮುದ್ರಣ ಮಾಡಿಸಿ ಅಗತ್ಯವಿರುವ ಎಲ್ಲಾ ದಾಖಲೆಗಳ ಪ್ರತಿಗಳನ್ನು ಸ್ವತ: ದೃಢೀಕರಿಸಿ (self attested) ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸಿ "ವ್ಯವಸ್ಥಾಪಕ ನಿರ್ದೇಶಕರು, ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ, ಮಂಗಳೂರು ಡೇರಿ ಆವರಣ, ಕುಲಶೇಖರ, ಮಂಗಳೂರು – 575 005" ವಿಳಾಸಕ್ಕೆ ದಿನಾಂಕ 29–01–2016ರಂದು ಸಂಜೆ 5.30 ಘಂಟೆಯೊಳಗೆ ಅಥವಾ ಅದಕ್ಕೂ ಮುಂಚಿತವಾಗಿ ತಲುಪುವಂತೆ ಅಂಚೆ : ಕೊರಿಯರ್ ಮೂಲಕ ಅಥವಾ ಖುದ್ದಾಗಿ ಕಳುಹಿಸತಕ್ಕದ್ದು. ಲಕೋಟೆಯ ಮೇಲೆ ಅರ್ಜಿ ಸಲ್ಲಿಸುವ ಹುದ್ದೆಯ ಹೆಸರನ್ನು ನಮೂದಿಸಬೇಕು. ಸಂಪೂರ್ಣ ಮಾಹಿತಿ ಒಳಗೊಂಡಿರದ ಹಾಗೂ ಅಗತ್ಯ ಪ್ರಮಾಣ ಪತ್ರಗಳು/ ಭಾವಚಿತ್ರ / ಡಿ.ಡಿ/ ಸಹಿ ಮಾಡದೇ ಇರುವ ಅರ್ಜಿಗಳನ್ನು ಮತ್ತು ಕೊನೆಯ ದಿನಾಂಕ 29–01–2016ರಂದು ಸಂಜೆ 5.30 ಘಂಟೆಯ ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ:

**ವ್ಯವಸ್ಥಾಪಕ ನಿರ್ದೇಶಕರು.**

**ಶೈಕ್ಷಣಿಕ ಮತ್ತು ವೃತ್ತಿಪರ ವಿದ್ಯಾರ್ಹತೆ ಬಗ್ಗೆ ಕಲಂ 11 ರಲ್ಲಿ ನಮೂದಿಸಬೇಕಾದ ವಿದ್ಯಾರ್ಹತೆಯ ವಿವರಗಳು.**

| ಕ್ರ.ಸಂ | ಹುದ್ದೆಗಳು | ವಿದ್ಯಾರ್ಹತೆ |
|---|---|---|
| 01 | ಸಹಾಯಕ ವ್ಯವಸ್ಥಾಪಕರು (ಎ.ಹೆಚ್./ಎ.ಐ.) | B.V.Sc. ಅಥವಾ B.V.Sc. &A.Hಪದವಿ |
| 02 | ಸಹಾಯಕ ವ್ಯವಸ್ಥಾಪಕರು (ಎಫ್ ಅಂಡ್ ಎಫ್.) | B.Sc.(Agri) ಪದವಿ |
| 03 | ತಾಂತ್ರಿಕ ಅಧಿಕಾರಿ (ಡಿ.ಟಿ.) | B.Sc.(DT) ಅಥವಾ B.Tech (D.Tech) ಪದವಿ |
| 04 | ತಾಂತ್ರಿಕ ಅಧಿಕಾರಿ (ಇಂಜಿನಿಯರಿಂಗ್) | B.E/B.Tech in Mechanical or E & E Engineering |
| 05 | ಮಾರುಕಟ್ಟೆ ಅಧಿಕಾರಿ | M.B.A |
| 06 | ಕಾರ್ಮಿಕ ಕಲ್ಯಾಣ ಅಧಿಕಾರಿ | M.S.W ಅಥವಾ P.G.D.I.R. & P.M. |
| 07 | ವಿಸ್ತರಣಾಧಿಕಾರಿ ದರ್ಜೆ– III | B.Com. ಅಥವಾ B.B.M ಅಥವಾ ಇತರ ಪದವಿ |
| 08 | ಡೇರಿ ಸೂಪರ್‌ವೈಸರ್ ದರ್ಜೆ–II | Diploma in Mechanical or Civil or E & E or E & C Engineering |
| 09 | ಕಿರಿಯ ಸಿಸ್ಟಂ ಅಪರೇಟರ್ | B.C.A. |
| 10 | ಕೆಮಿಸ್ಟ್ ದರ್ಜೆ– II | B.Sc. |
| 11 | ಮಾರುಕಟ್ಟೆ ಸಹಾಯಕರು ದರ್ಜೆ– II | B.B.M.or B.Com. |
| 12 | ಲೆಕ್ಕ ಸಹಾಯಕರು ದರ್ಜೆ– II | B.Com. |
| 13 | ಕಿರಿಯ ತಾಂತ್ರಿಕರು | SSLC.+I.T.I. (National Trade Certificate)/or SSLC.+First Class Boiler Attendent Certificate of Competency |